ಪ್ರಜಾವಾಣಿ



ನಗರದ ಜೈನ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ಏರ್ಪಡಿಸಿದ್ದ 'ಗೋ ಗ್ರೀನ್ ಡೇ' ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿನಿಯರು

# ಜೈನ್ ವಿ.ವಿ: ಪರಿಸರ ದಿನಾಚರಣೆ

ಬೆಂಗಳೂರು: 'ಪರಿಸರ ದಿನಾಚರಣೆ ಒಂದು ದಿನಕ್ಕೆ ಮಾತ್ರ ಸೀಮಿತವಾಗಬಾರದು ವರ್ಷದ ಎಲ್ಲಾ ದಿನಗಳಲ್ಲಿ ಪರಿಸರದ ಬಗ್ಗೆ ಕಾಳಜಿ ವಹಿಸುವಂತಹ ಕಾರ್ಯವಾಗಬೇಕಿದೆ' ಎಂದು ಧಾರಾವಾಹಿ ನಟಿ ಗೀತಾ ಹೇಳಿದರು.

ನಗರದ ಜೈನ್ ಯುನಿವರ್ಸಿಟಿಯಲ್ಲಿ ಸೋಮವಾರ ಏರ್ಪಡಿಸಿದ್ದ 'ಗೋ ಗ್ರೀನ್ ಡೇ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ' ಪರಿಸರದ ಬಗ್ಗೆ ಕಾಳಜಿಯುಳ್ಳ ಜಾಗೃತ ಕಾರ್ಯಕ್ರಮಗಳು ದೇಶದಾದ್ಯಂತ ನಡೆಯಬೇಕಿದೆ, ಹಸಿರಿನಿಂದ ಕೂಡಿದ ವಾತಾವರಣದಿಂದ ಮಾತ್ರ ಉತ್ತಮ ಪರಿಸರ ವ್ಯವಸ್ಥೆ ಏರ್ಪಡಲು ಸಾಧ್ಯ' ಎಂದು ತಿಳಿಸಿದರು.

ಮತ್ತೊಬ್ಬ ಧಾರವಾಹಿ ನಟಿ ದಿವ್ಯ ಮಾತನಾಡುತ್ತ, 'ಅರಣ್ಯ ನಾಶದಿಂದ ಪರಿಸರದಲ್ಲಿ ಜಾಗತಿಕ ತಾಪಮಾನ, ಹವಾಮಾನ ಬದಲಾವಣೆ, ಭೂಕುಸಿತ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಮಾನವನ ದುರಾಸೆಗೆ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತಿದ್ದು, ನಮ್ಮ ಸುತ್ತಮುತ್ತಲಿನ ಪ್ರದೇಶ ಹಸಿರಿನಿಂದ ಸದಾ ಕೂಡಿರುವಂತೆ ಮಾಡುವುದು ನಮ್ಮ ನಿಮ್ಮೆಲ್ಲರ ಆಧ್ಯ ಕರ್ತವ್ಯ' ಎಂದು ಹೇಳಿದರು.

'ಪರಿಸರ ಉಳಿಸುವ ಬಗ್ಗೆ ಸಾಮಾನ್ಯ ಜನರಲ್ಲಿ ಜಾಗೃತಿಮೂಡಿಸುವುದು' ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ' ಎಂದರು.

ಜೈನ್ ಕಾಲೇಜಿನ ವಿದ್ಯಾರ್ಥಿಗಳು ವಸ್ತುಗಳನ್ನು ಮರುಬಳಕೆ ಮಾಡುವ ಮುಖಾಂತರ ಮನೆಗೆ ಬೇಕಾದ ಸುಂದರವಾದ ಒಳಾಂಗಣ ಮತ್ತು ಹೊರಾಂಗಣ ಪೀಠೋಪಕರಣಗಳನ್ನು ತಯಾರಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ಹೇಗೆ ಉಳಿಸಬೇಕು ಎಂದು ವಸ್ತುಸಂಗ್ರಹಾಲಯ ಪ್ರದರ್ಶನ ಏರ್ಪಡಿಸಿದ್ದರು.